**<u>ದಿನಾಂಕಃ 12.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು:- ವಾದಿ ಪರ ಶ್ರೀ ಎಸ್.ಬಿ.ಡಿ. ವಕೀಲರಿಂದಃ</u>**

1) ನಿಡಿ.2 ರ ದಾಖಲೆ ಅಸಂಬದ್ಧವಾದ ದಾಖಲೆ ಎಂದರೆ ಸರಿಯಲ್ಲ. ಕೆಂಪೇಗೌಡರವರು ನನ್ನ ಯಜಮಾನರ ಹೆಸರಿನಲ್ಲಿ ವಿಲ್ ಮಾಡಿದ ಕಾರಣ ನಿಡಿ.1 ರ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. 1993 ರಲ್ಲಿ ವಿಲ್ ಮಾಡಿರುತ್ತಾರೆ. ಅದರ ಮೇರೆಗೆ ಪ್ರೊಬೇಟ್ ಅನ್ನು ಪಡೆದುಕೊಳ್ಳಲು ಕ್ರಮ ಕೈಗೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ ನಿಡಿ.3 ರಿಂದ 20 ರವರೆಗಿನ ರಶೀದಿಗಳು ದಾವಾ ಸ್ವತ್ತಿಗೆ ಸಂಬಂಧಿಸಿರುತ್ತವೆ. ನಿಡಿ.21 ರಿಂದ 30 ರವರೆಗಿನ ಭಾವಚಿತ್ರಗಳನ್ನು ಯಾವುದಾದರೂ ಜಮೀನಿನಲ್ಲಿ ತೆಗೆಯಬಹುದು ಎಂದರೆ ಸಾಕ್ಷಿಯು ತಮ್ಮ ಸ್ವತ್ತಿನಲ್ಲಿ ತೆಗೆದಿರುವುದಾಗಿ ನುಡಿಯುತ್ತಾರೆ.

2) ವಾದಿಯು ಕಂದಾಯ ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂಬುದರ ವಿರುದ್ಧ ಬೇರೆ ಯಾವುದೇ ಪ್ರಕರಣಗಳನ್ನು ದಾಖಲಿಸಿಲ್ಲ. ದಾವಾ ಸ್ವತ್ತು ನಮಗೆ ವಿಲ್ ಮುಖಾಂತರ ಬಂದಿರುತ್ತದೆ. ಪ್ರಸ್ತುತ ಪ್ರಕರಣ ಸಲ್ಲಿಸುವ ಮೊದಲೇ ರಾಜಿ ಸಂಧಾನಕ್ಕೆ ಶಿವರಾಜೇಗೌಡರ ಮನೆಯಲ್ಲಿ ಸೇರಿದ್ದೆವು ಎಂದರೆ ಸರಿಯಲ್ಲ. ನಿಮಗೆ ಇನ್ನೂ ಅನೇಕ ಕಡೆ ಜಮೀನುಗಳು ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಡೆದಿರುವ ಪ್ರಕರಣಗಳ ಬಗ್ಗೆ ನನಗೆ ತಿಳಿದಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ನಿಪಿ.11 ರ ದಾಖಲೆಯ ಪ್ರಕಾರ ದಾವಾ ಸ್ವತ್ತಿನ ಮೇಲೆ ಸಾಲ ಪಡೆದಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

3) ಡಿಡಬ್ಲ್ಯೂ-2 ರವರು ನಮ್ಮ ಮನೆಯ ಹಿಂಬದಿ ಇರುತ್ತಾರೆ. ಸಾಕ್ಷಿಯು ಮುಂದುವರೆದು ತಮ್ಮ ತೋಟದ ಪಕ್ಕದಲ್ಲಿಯೂ ಸಹ ಇರುವುದಾಗಿ ನುಡಿಯುತ್ತಾರೆ. ಡಿಡಬ್ಲ್ಯೂ-**2** ರವರು ನಮ್ಮ ಕಷ್ಟ ಸುಖದಲ್ಲಿ ಭಾಗಿಯಾಗುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮತ್ತು ಅವರ ಜಮೀನುಗಳ ನಡುವೆ **100** ಮೀ ಅಂತರ ಇರುತ್ತದೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮಧ್ಯಂತರ ಆದೇಶವನ್ನು ನಾವು ಉಲ್ಲಂಘಿಸಿರುತ್ತೇವೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ವಾದಿಗಳ ಸಾಕ್ಷಿದಾರರನ್ನು ಉತ್ತೇಜಿಸಲು ಪ್ರಯತ್ನ ಪಟ್ಟಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**